KACM710016772022

**<u>1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.</u>**

<u>ಉಪಸ್ಥಿತರು</u>

ಶ್ರೀಮತಿ ಉರ್ಮಿಳ.ವಿ., ಬಿ.ಎ.ಎಲ್., ಎಲ್ಎಲ್‌ಬಿ.,
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

ದಿನಾಂಕ ಃ **25** ನೇ ಜುಲೈ **2026**

<u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆ **1156/2022**</u>

ಫಿರ್ಯಾದಿ ಃ ರಾಜ್ಯದ ಪರವಾಗಿ ಲಕ್ಕವಳ್ಳಿ ಪೊಲೀಸರು

**(**ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು**)**

**-**ವಿರುದ್ಧ**-**

ಆರೋಪಿ/ತರು ಃ

1) ರತ್ನಪ್ರಭ, ಸಹಾಯಕ ಉಪ ಅರಣ್ಯಾಧಿಕಾರಿಗಳು, ಭದ್ರಾ ವನ್ಯಜೀವಿ ವಿಭಾಗ, ಲಕ್ಕವಳ್ಳಿ ವಲಯ, ಲಕ್ಕವಳ್ಳಿ.
2) ಚಂದ್ರು ಬಿನ್ ಮಂಜು, 40 ವರ್ಷ, ವ್ಯಾಪಾರಗಾರರು, ವಾಸ ಃ ಕಾಲಭೈರವೇಶ್ವರ ನಿಲಯ, ಹೊಸಮನೆ, ಹನುಮಂತ ನಗರ ಮುಖ್ಯರಸ್ತೆ, ಭದ್ರಾವತಿ ಟೌನ್, ಶಿವಮೊಗ್ಗ ಜಿಲ್ಲೆ.
3) ಸುರೇಶ್.ಪಿ. ಬಿನ್ ಪರಮೇಶ್ವರಪ್ಪ, 53 ವರ್ಷ ಜೀಪ್ ಚಾಲಕರು, ಭದ್ರಾ ವನ್ಯಜೀವಿ ವಿಭಾಗ, ಲಕ್ಕವಳ್ಳಿ.

(ಪ್ರತಿನಿಧಿಸುವವರುಃ ಶ್ರೀ ಅಸೀಂ ಅಹಮದ್, ನ್ಯಾಯವಾದಿಗಳು.)

| | | |
|---|---|---|
| 1 | ಅಪರಾಧ ನಡೆದ ದಿನಾಂಕ | 20.08.2020 |
| 2 | ಅಪರಾಧ ವರದಿ ಮಾಡಿದ ದಿನಾಂಕ | 21.08.2020 |
| 3 | ಆರೋಪಿತರನ್ನು ಬಂಧಿಸಿದ ದಿನಾಂಕ | -- |
| 4 | ಫಿರ್ಯಾದಿಯ ಹೆಸರು | ಶ್ರೀಮತಿ ಗಾಯತ್ರಿ.ಆರ್ |

Visit **ecourts.gov.in** for updates or download mobile app "**eCourts Services**" from Android or iOS

KACM710016772022

| | | |
|---|---|---|
| 5 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 15.06.2026 |
| 6 | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 15.06.2026 |
| 7 | ಆರೋಪಿಸಲಾದ ಅಪರಾಧಗಳು | ಭಾ.ದ.ಸಂ.ಕಲಂ 504, 448, 323, 354, 323 ಸಹವಾಚಕ ಕಲಂ 34 |
| 8 | ನ್ಯಾಯಾಧೀಶರ ಅಭಿಪ್ರಾಯ | ಆರೋಪಿತರು ನಿರಪರಾಧಿ |

*******

<u>ತೀರ್ಪು</u>

ಪೊಲೀಸ್ ಉಪನಿರೀಕ್ಷಕರು, ಲಕ್ಕವಳ್ಳಿ ಪೊಲೀಸ್ ಠಾಣೆ ಇವರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 504, 448, 323, 354 ಮತ್ತು 323 ಸಹವಾಚಕ ಕಲಂ 34 ರಡಿಯಲ್ಲಿ ದೋಷಾರೋಪಣೆ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

2. <u>ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ-</u>

ದಿನಾಂಕ 20.08.2020 ರಂದು ಸಂಜೆ 06.00 ಗಂಟೆಯ ಸಮಯದಲ್ಲಿ ಲಕ್ಕವಳ್ಳಿ ಪೊಲೀಸ್ ಠಾಣಾ ಸರಹದ್ದಿನ ಲಕ್ಕವಳ್ಳಿ ಗ್ರಾಮದಲ್ಲಿ, ಚಾಸಾ-1 ಗಾಯತ್ರಿಯವರು ಪ್ರಾಕ್ಷಿಕ ಸತ್ಯಪ್ರಭಾ ಪತ್ರಿಕೆಯ ವರದಿಗಾರರಾದ ಚಾಸಾ-6 ಮತ್ತು ಚಾಸಾ-7 ರವರೊಂದಿಗೆ ಮನೆಯ ಬಳಿಯಿರುವಾಗ, ದಿನಾಂಕ 16.07.2020 ರಿಂದ 31.07.2020 ರ ಮಧ್ಯದ ಅವಧಿಯಲ್ಲಿ ಚಾಸಾ-6 ರವರು ಪ್ರಾಕ್ಷಿಕ ಸತ್ಯ ಪ್ರಭಾ ಕನ್ನಡ ಪತ್ರಿಕೆಯಲ್ಲಿ ಅರಣ್ಯ ಅಭಿವೃದ್ಧಿ ಹೆಸರಿನಲ್ಲಿ ಸರ್ಕಾರದ ಹಣ ಲೂಟಿ, ಅಧಿಕಾರಿ ವಿರುದ್ಧ ಕ್ರಮ ಏಕಿಲ್ಲ? ಎಂಬ ಶೀರ್ಷಿಕೆಯಲ್ಲಿ ವರದಿ ಮಾಡಿದ ಹಿನ್ನಲೆಯಲ್ಲಿ, 1 ನೇ ಆರೋಪಿಯ ಮೇಲೆ ಸತ್ಯ ಪ್ರಭಾ ಪತ್ರಿಕೆಯಲ್ಲಿ ಬರೆದಿರುವ ವಿಚಾರದಲ್ಲಿ 1 ನೇ ಆರೋಪಿಯು 2 ಮತ್ತು 3 ನೇ ಆರೋಪಿತರೊಂದಿಗೆ ಸಮಾನ ಉದ್ದೇಶದಿಂದ ಕೆಏ:18/ಜಿ-1063 ನೇ ಜೀಪಿನಲ್ಲಿ

Visit **ecourts.gov.in** for updates or download mobile app “**eCourts Services**” from Android or iOS

ಬಂದು ಚಾಸಾ-1 ರವರ ಮನೆಯ ಕಾಂಪೌಂಡ್ ಒಳಗೆ ಅತಿಕ್ರಮ ಪ್ರವೇಶ ಮಾಡಿ, 1 ಮತ್ತು 2 ನೇ ಆರೋಪಿತರು ಚಾಸಾ-6 ರವರಿಗೆ ಅವಾಚ್ಯ ಶಬ್ದಗಳಿಂದ ಏನೋ ಸೂಳೆಮಗನೆ, ಬೋಳಿಮಗನೆ, ಲೋಫರ್, ಸತ್ಯ ಪ್ರಭಾ ಪತ್ರಿಕೆಯಲ್ಲಿ ಏನಂತ ವರದಿ ಕೊಟ್ಟಿದ್ದಿಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು, 1 ಮತ್ತು 2 ನೇ ಆರೋಪಿತರು ಚಾಸಾ-6 ರವರಿಗೆ ಕೈಗಳಿಂದ ಕೆನ್ನೆಗೆ ಹೊಡೆದಿದ್ದು, ಚಾಸಾ-6 ರವರು ಕೆಳಗೆ ಬಿದ್ದಾಗ 2 ನೇ ಆರೋಪಿಯು ಕೈಕಾಲಿನಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಬಿಡಿಸಲು ಬಂದ ಚಾಸಾ-1 ರವರಿಗೆ 2 ನೇ ಆರೋಪಿಯು ರಟ್ಟೆ ಹಾಗೂ ತಲೆ ಕೂದಲು ಹಿಡಿದು ಜೋರಾಗಿ ತಳ್ಳಿ, ಪುನಃ ಚಾಸಾ-1 ರವರ ಮೈಯನ್ನು ಮುಟ್ಟಿ ತಳ್ಳಿ, ಅವರ ಮಾನಕ್ಕೆ ಭಂಗ ಬರುವಂತೆ ವರ್ತಿಸಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, ಚಾಸಾ-1 ಮತ್ತು 6 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ. ಆದ್ದರಿಂದ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

3. ಪ್ರಸ್ತುತ ಪ್ರಕರಣದಲ್ಲಿ ಪ್ರಕರಣವು ತನಿಖಾ ಹಂತದಲ್ಲಿರುವಾಗ 1 ಮತ್ತು 3 ನೇ ಆರೋಪಿತರು ವಕೀಲರ ಮೂಲಕ ನ್ಯಾಯಾಲಯದ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ತನಿಖಾಧಿಕಾರಿಗಳು ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು. ಆರೋಪಿತರು ಸಮನ್ಸ್ ಪಡೆದು ನ್ಯಾಯಾಲಯದ ಮುಂದೆ ಹಾಜರಾಗಿದ್ದು, 2 ನೇ ಆರೋಪಿಯು ವಕೀಲರ ಮೂಲಕ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಆರೋಪಿತರಿಗೆ ಅಭಿಯೋಜನೆಯ ಎಲ್ಲಾ ದಸ್ತಾವೇಜುಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಅನುಸಾರ ಒದಗಿಸಲಾಗಿರುತ್ತದೆ. ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 448, 504, 323, 354 ಮತ್ತು 506 ಸಹವಾಚಕ ಕಲಂ 34 ರಲ್ಲಿನ ಶಿಕ್ಷಾರ್ಹ

Visit **ecourts.gov.in** for updates or download mobile app "**eCourts Services**" from Android or iOS

ಅಪರಾಧಕ್ಕಾಗಿ ಆರೋಪಣೆಯನ್ನು ರಚಿಸಲಾಯಿತು. ಆರೋಪಿತರು ಆರೋಪಣೆಯನ್ನು ನಿರಾಕರಿಸಿ ವಿಚಾರಣೆಯನ್ನು ಬಯಸಿರುತ್ತಾರೆ.

4. ಅಭಿಯೋಜನೆಯು ದೋಷಾರೋಪಣಾ ಪಟ್ಟಿಯಲ್ಲಿ ತೋರಿಸಿರುವ 18 ಸಾಕ್ಷಿದಾರರ ಪೈಕಿ ಚಾಸಾ-1, 6 ಮತ್ತು 7 ರವರು ಕ್ರಮವಾಗಿ ಅಸಾ-1 ರಿಂದ 3 ರಂತೆ ಸಾಕ್ಷ್ಯ ನುಡಿದಿರುತ್ತಾರೆ. ಅಸಾ-1 ರವರು ಪಿರ್ಯಾದುದಾರರು, ಗಾಯಾಳು ಹಾಗೂ ಮಹಜರು ಸಾಕ್ಷಿದಾರರಾಗಿ, ಅಸಾ-2 ರವರು ಗಾಯಾಳು ಹಾಗೂ ಪ್ರತ್ಯಕ್ಷ ಸಾಕ್ಷಿದಾರರಾಗಿ ಮತ್ತು ಅಸಾ-3 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿ ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸುವುದರಿಂದ ಅಭಿಯೋಜನೆಗೆ ಯಾವುದೇ ರೀತಿಯ ಸಹಾಯ ಆಗುವುದಿಲ್ಲವೆಂದು ತಿಳಿದು ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆಯನ್ನು ತಿರಸ್ಕರಿಸಿ ಉಳಿದ ಸಾಕ್ಷಿದಾರರ ವಿಚಾರಣೆಯನ್ನು ಕೈಬಿಡಲಾಗಿರುತ್ತದೆ. ಅಭಿಯೋಜನೆಯು 8 ದಾಖಲೆಗಳನ್ನು ಹಾಜರುಪಡಿಸಿ ಅದನ್ನು ನಿಪಿ-1 ರಿಂದ 8 ಎಂದು ಗುರ್ತಿಸಿಕೊಂಡಿರುತ್ತದೆ.

5. ಅಭಿಯೋಜನೆಯು ತನ್ನ ಪರವಾಗಿ ವಿಚಾರಣೆ ಮುಗಿಸಿದ ನಂತರ ಈ ಪ್ರಕರಣದಲ್ಲಿ ಆರೋಪಿತರ ವಿರುದ್ಧ ಸಾಕ್ಷ್ಯವು ಇಲ್ಲದೇ ಇರುವುದರಿಂದ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿನ ಆರೋಪಿತರ ಹೇಳಿಕೆಗಳನ್ನು ಕೈಬಿಡಲಾಗಿರುತ್ತದೆ.

6. ಆರೋಪಿತರು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ನ್ನು ಪಾಲನೆ ಮಾಡಿರುತ್ತಾರೆ.

7. ಆರೋಪಿತರ ಪರ ಹಾಗೂ ಅಭಿಯೋಜಕರ ಪರ ವಾದ ಪ್ರತಿವಾದಗಳನ್ನು ಆಲಿಸಲಾಯಿತು.

Visit **ecourts.gov.in** for updates or download mobile app "**eCourts Services**" from Android or iOS

8. ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುತ್ತದೆ ಃ

**1)** ದಿನಾಂಕ 20.08.2020 ರಂದು ಸಂಜೆ 06.00 ಗಂಟೆಯ ಸಮಯದಲ್ಲಿ ಲಕ್ಕವಳ್ಳಿ ಪೊಲೀಸ್ ಠಾಣಾ ಸರಹದ್ದಿನ ಲಕ್ಕವಳ್ಳಿ ಗ್ರಾಮದಲ್ಲಿ, ಚಾಸಾ-1 ರವರು ಪ್ರಾಕ್ಷಿಕ ಸತ್ಯಪ್ರಭಾ ಪತ್ರಿಕೆಯ ವರದಿಗಾರರಾದ ಚಾಸಾ-6 ಮತ್ತು ಚಾಸಾ-7 ರವರೊಂದಿಗೆ ಮನೆಯ ಬಳಿಯಿರುವಾಗ, ದಿನಾಂಕ 16.07.2020 ರಿಂದ 31.07.2020 ರ ಮಧ್ಯದ ಅವಧಿಯಲ್ಲಿ ಚಾಸಾ-6 ರವರು ಪ್ರಾಕ್ಷಿಕ ಸತ್ಯ ಪ್ರಭಾ ಕನ್ನಡ ಪತ್ರಿಕೆಯಲ್ಲಿ ಅರಣ್ಯ ಅಭಿವೃದ್ಧಿ ಹೆಸರಿನಲ್ಲಿ ಸರ್ಕಾರದ ಹಣ ಲೂಟಿ, ಅಧಿಕಾರಿ ವಿರುದ್ಧ ಕ್ರಮ ಏಕಿಲ್ಲ? ಎಂಬ ಶೀರ್ಷಿಕೆಯಲ್ಲಿ ವರದಿ ಮಾಡಿದ ಹಿನ್ನಲೆಯಲ್ಲಿ, 1 ನೇ ಆರೋಪಿಯ ಮೇಲೆ ಸತ್ಯ ಪ್ರಭಾ ಪತ್ರಿಕೆಯಲ್ಲಿ ಬರೆದಿರುವ ವಿಚಾರದಲ್ಲಿ 1 ನೇ ಆರೋಪಿಯು 2 ಮತ್ತು 3 ನೇ ಆರೋಪಿತರೊಂದಿಗೆ ಸಮಾನ ಉದ್ದೇಶದಿಂದ ಕೆಎಃ18/ಜಿ-1063 ನೇ ಜೀಪಿನಲ್ಲಿ ಬಂದು ಚಾಸಾ-1 ರವರ ಮನೆಯ ಕಾಂಪೌಂಡ್ ಒಳಗೆ ಅತಿಕ್ರಮ ಪ್ರವೇಶ ಮಾಡಿದ್ದು, ಆದ್ದರಿಂದ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 448 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸೆಗಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುತ್ತಾರೆಯೇ?

**2)** ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ, 1 ಮತ್ತು 2 ನೇ ಆರೋಪಿತರು ಚಾಸಾ-6 ರವರಿಗೆ ಅವಾಚ್ಯ ಶಬ್ದಗಳಿಂದ ಏನೋ ಸೂಳೆಮಗನೆ, ಬೋಳಿಮಗನೆ, ಲೋಫರ್ ಸತ್ಯ ಪ್ರಭಾ ಪತ್ರಿಕೆಯಲ್ಲಿ ಎನಂತ ವರದಿ ಕೊಟ್ಟಿದ್ದಿಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿದ್ದು, ಆದ್ದರಿಂದ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸೆಗಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುತ್ತಾರೆಯೇ?

3) ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ, 1 ಮತ್ತು 2 ನೇ ಆರೋಪಿತರು ಚಾಸಾ-6 ರವರಿಗೆ ಕೈಗಳಿಂದ ಕೆನ್ನೆಗೆ ಹೊಡೆದಿದ್ದು, ಚಾಸಾ-6 ರವರು ಕೆಳಗೆ ಬಿದ್ದಾಗ 2 ನೇ

ಆರೋಪಿಯು ಕೈಕಾಲಿನಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಬಿಡಿಸಲು ಬಂದ ಚಾಸಾ-1 ರವರಿಗೆ 2 ನೇ ಆರೋಪಿಯು ರಟ್ಟೆ ಹಾಗೂ ತಲೆ ಕೂದಲು ಹಿಡಿದು ಜೋರಾಗಿ ತಳ್ಳಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆದ್ದರಿಂದ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸೆಗಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುತ್ತಾರೆಯೇ?

4) ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಸಮಾನ ಉದ್ದೇಶದಿಂದ, 2 ನೇ ಆರೋಪಿಯು ಚಾಸಾ-1 ರವರ ಮೈಯನ್ನು ಮುಟ್ಟಿ ತಳ್ಳಿ, ಅವರ ಮಾನಕ್ಕೆ ಭಂಗ ಬರುವಂತೆ ವರ್ತಿಸಿದ್ದು, ಆದ್ದರಿಂದ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 354 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸೆಗಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುತ್ತಾರೆಯೇ?

5) ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಸಮಾನ ಉದ್ದೇಶದಿಂದ, ಚಾಸಾ-1 ಮತ್ತು 6 ರವರಿಗೆ ಕೊಲೆ ಬೆದರಿಕೆ ಹಾಕಿದ್ದು, ಆದ್ದರಿಂದ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸೆಗಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುತ್ತಾರೆಯೇ?

6) ಹಾಗಿದ್ದರೆ ಯಾವ ಆಜ್ಞೆ?

9. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ ಃ

ಅಂಶ-1 ಃ ನಕಾರಾತ್ಮಕವಾಗಿ,

ಅಂಶ-2 ಃ ನಕಾರಾತ್ಮಕವಾಗಿ,

ಅಂಶ-3 ಃ ನಕಾರಾತ್ಮಕವಾಗಿ,

ಅಂಶ-4 ಃ ನಕಾರಾತ್ಮಕವಾಗಿ,

ಅಂಶ-5ಃ ನಕಾರಾತ್ಮಕವಾಗಿ,

ಅಂಶ-6ಃ ಅಂತಿಮ ಆದೇಶದಂತೆ,

<u>-ಃ ಕಾ ರ ಣ ಗ ಳು ಃ-</u>

10. <u>ಅಂಶ-**1** ರಿಂದ **5** ಃ</u> ಈ ಎಲ್ಲಾ ಅಂಶಗಳು ಒಂದಕ್ಕೊಂದು ಪೂರಕವಾಗಿರುವ ಕಾರಣ ಎಲ್ಲಾ ಅಂಶಗಳನ್ನು ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ. ಅಭಿಯೋಜನೆಯು ದಿನಾಂಕ 20.08.2020 ರಂದು ಸಂಜೆ 06.00 ಗಂಟೆಯ ಸಮಯದಲ್ಲಿ ಲಕ್ಕವಳ್ಳಿ ಗ್ರಾಮದಲ್ಲಿ, 1 ನೇ ಆರೋಪಿಯು 2 ಮತ್ತು 3 ನೇ ಆರೋಪಿತರೊಂದಿಗೆ ಸಮಾನ ಉದ್ದೇಶದಿಂದ ಕೆಎಃ18/ಜಿ-1063 ನೇ ಜೀಪಿನಲ್ಲಿ ಬಂದು ಚಾಸಾ-1 ರವರ ಮನೆಯ ಕಾಂಪೌಂಡ್ ಒಳಗೆ ಅತಿಕ್ರಮ ಪ್ರವೇಶ ಮಾಡಿ, 1 ಮತ್ತು 2 ನೇ ಆರೋಪಿತರು ಚಾಸಾ-6 ರವರಿಗೆ ಅವಾಚ್ಯ ಶಬ್ದಗಳಿಂದ ಏನೋ ಸೂಳೆಮಗನೆ, ಬೋಳಿಮಗನೆ, ಲೋಫರ್, ಸತ್ಯ ಪ್ರಭಾ ಪತ್ರಿಕೆಯಲ್ಲಿ ಏನಂತ ವರದಿ ಕೊಟ್ಟಿದ್ದಿಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು, 1 ಮತ್ತು 2 ನೇ ಆರೋಪಿತರು ಚಾಸಾ-6 ರವರಿಗೆ ಕೈಗಳಿಂದ ಕೆನ್ನೆಗೆ ಹೊಡೆದಿದ್ದು, ಚಾಸಾ-6 ರವರು ಕೆಳಗೆ ಬಿದ್ದಾಗ 2 ನೇ ಆರೋಪಿಯು ಕೈಕಾಲಿನಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಬಿಡಿಸಲು ಬಂದ ಚಾಸಾ-1 ರವರಿಗೆ 2 ನೇ ಆರೋಪಿಯು ರಟ್ಟೆ ಹಾಗೂ ತಲೆ ಕೂದಲು ಹಿಡಿದು ಜೋರಾಗಿ ತಳ್ಳಿ, ಪುನಃ ಚಾಸಾ-1 ರವರ ಮೈಯನ್ನು ಮುಟ್ಟಿ ತಳ್ಳಿ, ಅವರ ಮಾನಕ್ಕೆ ಭಂಗ ಬರುವಂತೆ ವರ್ತಿಸಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, ಚಾಸಾ-1 ಮತ್ತು 6 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂಬುದನ್ನು ಸಂಶಯಾತೀತವಾಗಿ ಸಾಬೀತು ಪಡಿಸಬೇಕಾಗಿರುತ್ತದೆ.

11. ಚಾಸಾ-1/ಅಸಾ-1 ರವರು ಈ ಪ್ರಕರಣದ ಪಿರ್ಯಾದುದಾರರು, ಗಾಯಾಳು ಮತ್ತು ಮಹಜರು ಸಾಕ್ಷಿಯಾಗಿದ್ದು, ತಮ್ಮ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ ಚಾಸಾ-6 ತನ್ನ ಗಂಡ, ಚಾಸಾ-7 ತನ್ನ ಮಗಳು, ಆರೋಪಿತರು ತಮ್ಮ ಮನೆಗೆ ಅತಿಕ್ರಮ ಪ್ರವೇಶ

Visit **ecourts.gov.in** for updates or download mobile app “**eCourts Services**” from Android or iOS

ಮಾಡಿರುವುದಿಲ್ಲ, 1 ಮತ್ತು 2 ನೇ ಆರೋಪಿತರು ತನ್ನ ಗಂಡನಿಗೆ ಯಾವುದೇ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಹಾಗೂ ಅವರ ಮೇಲೆ ಹಲ್ಲೆ ಮಾಡಿರುವುದಿಲ್ಲ, 2 ನೇ ಆರೋಪಿಯು ತನ್ನ ಮೇಲೆ ಹಲ್ಲೆ ಮಾಡಿರುವುದಿಲ್ಲ, ಆರೋಪಿತರು ತನಗೂ ಹಾಗೂ ತನ್ನ ಗಂಡನಿಗೂ ಕೊಲೆ ಬೆದರಿಕೆ ಹಾಕಿರುವುದಿಲ್ಲ, ಆರೋಪಿಗಳಿಂದ ತನಗೆ ಯಾವುದೇ ರೀತಿಯ ತೊಂದರೆಯಾಗಿರುವುದಿಲ್ಲ, ತಾನು ಈ ಪ್ರಕರಣದ ಸಂಬಂಧ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುವುದಿಲ್ಲ, ಈ ಪ್ರಕರಣದ ಸಂಬಂಧ ಬೇರೆ ಏನೂ ಗೊತ್ತಿರುವುದಿಲ್ಲ ಎಂದು ನುಡಿದು, ದೂರಿನಲ್ಲಿರುವ ತನ್ನ ಸಹಿಯನ್ನು ನಿಪಿ-1(ಎ) ಎಂದು ಹಾಗೂ ಮಹಜರಿನಲ್ಲಿರುವ ತನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಿ, ನಿಪಿ-3 ಮತ್ತು 4 ರಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ. ಅಸಾ-1 ರವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಎಲ್ಲಾ ಸಲಹೆಗಳನ್ನು ಅಲ್ಲಗೆಳೆದಿರುತ್ತಾರೆ. ಅಸಾ-1 ರವರು ಮುಂದುವರೆದು ತಮ್ಮ ಪಾಟೀ ಸವಾಲಿನಲ್ಲಿ ದೂರಿನಲ್ಲಿ ಹಾಗೂ ಮಹಜರಿನಲ್ಲಿ ಬರೆದ ವಿಚಾರಗಳು ತನಗೆ ಗೊತ್ತಿಲ್ಲ, ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆ ಸಿಆರ್.ಪಿ.ಸಿ. ಕಲಂ 164 ಅಡಿಯಲ್ಲಿ ಹೇಳಿಕೆಯನ್ನು ನೀಡಿದ್ದು, ಅದರಲ್ಲಿ ಹೇಳಿರುವ ವಿಚಾರ ಈಗ ತನಗೆ ನೆನಪಿಲ್ಲ, ತಾವು ಮತ್ತು ಆರೋಪಿತರು ಈ ಪ್ರಕರಣವನ್ನು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ ಎಂದು ನುಡಿದಿರುತ್ತಾರೆ. ಆ ಕಾರಣ ಅಸಾ-1 ರವರ ಸಾಕ್ಷ್ಯ ಅಭಿಯೋಜನೆಗೆ ಸಹಾಯಕವಾಗುವುದಿಲ್ಲ.

12. ಚಾಸಾ-6/ಅಸಾ-2 ರವರು ಈ ಪ್ರಕರಣದ ಗಾಯಾಳು ಹಾಗೂ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಅಸಾ-2 ರವರು ತಮ್ಮ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ ಚಾಸಾ-1 ತನ್ನ ಹೆಂಡತಿ ಹಾಗೂ ಚಾಸಾ-7 ತನ್ನ ಮಗಳು, ಆರೋಪಿತರು ತಮ್ಮ ಮನೆಗೆ ಅತಿಕ್ರಮ ಪ್ರವೇಶ ಮಾಡಿರುವುದಿಲ್ಲ, 1 ಮತ್ತು 2 ನೇ ಆರೋಪಿತರು ತನಗೆ ಯಾವುದೇ ಅವಾಚ್ಯ

ಶಬ್ದಗಳಿಂದ ಬೈದಿರುವುದಿಲ್ಲ ಹಾಗೂ ತನ್ನ ಮೇಲೆ ಹಲ್ಲೆ ಮಾಡಿರುವುದಿಲ್ಲ, 2 ನೇ ಆರೋಪಿಯು ಚಾಸಾ-1 ರವರ ಮೇಲೆ ಹಲ್ಲೆ ಮಾಡಿರುವುದಿಲ್ಲ, ಆರೋಪಿತರು ತನಗೂ ಹಾಗೂ ಚಾಸಾ-1 ರವರಿಗೆ ಕೊಲೆ ಬೆದರಿಕೆ ಹಾಕಿರುವುದಿಲ್ಲ, ಆರೋಪಿಗಳಿಂದ ತನಗೆ ಯಾವುದೇ ರೀತಿಯ ತೊಂದರೆಯಾಗಿರುವುದಿಲ್ಲ, ತಾನು ಈ ಪ್ರಕರಣದ ಸಂಬಂಧ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುವುದಿಲ್ಲ, ಈ ಪ್ರಕರಣದ ಸಂಬಂಧ ಬೇರೆ ಏನೂ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಅಸಾ-2 ರವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಎಲ್ಲಾ ಸಲಹೆಗಳನ್ನು ಅಲ್ಲಗೆಳೆದು, ತಾನು ಪೊಲೀಸರ ಮುಂದೆ ನಿಪಿ-7 ರಂತೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ, ತಾವು ಮತ್ತು ಆರೋಪಿತರು ಈ ಪ್ರಕರಣವನ್ನು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ ಎಂದು ನುಡಿದಿರುತ್ತಾರೆ. ಆ ಕಾರಣ ಅಸಾ-2 ರವರ ಸಾಕ್ಷ್ಯ ಅಭಿಯೋಜನೆಗೆ ಸಹಾಯಕವಾಗುವುದಿಲ್ಲ.

13. ಚಾಸಾ-7/ಅಸಾ-3 ರವರು ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಅಸಾ-3 ರವರು ತಮ್ಮ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ ಚಾಸಾ-1 ಮತ್ತು 6 ತನ್ನ ತಂದೆ ಮತ್ತು ತಾಯಿ, ಸದರಿ ಘಟನೆಯನ್ನು ತಾನು ತನ್ನ ಕಣ್ಣಾರೆ ಕಂಡಿರುವುದಿಲ್ಲ, ಈ ಪ್ರಕರಣದ ಸಂಬಂಧ ತನಗೆ ಬೇರೇನೂ ಗೊತ್ತಿಲ್ಲ, ಆರೋಪಿತರಿಂದ ತನಗೆ ಯಾವುದೇ ತೊಂದರೆ ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ. ಅಸಾ-3 ರವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಎಲ್ಲಾ ಸಲಹೆಗಳನ್ನು ಅಲ್ಲಗೆಳೆದು, ತಾನು ಪೊಲೀಸರ ಮುಂದೆ ನಿಪಿ-8 ರಂತೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ, ತಾವು ಮತ್ತು ಆರೋಪಿತರು ಈ

Visit **ecourts.gov.in** for updates or download mobile app "**eCourts Services**" from Android or iOS

ಪ್ರಕರಣವನ್ನು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ ಎಂದು ನುಡಿದಿರುತ್ತಾರೆ. ಆ ಕಾರಣ ಅಸಾ-3 ರವರ ಸಾಕ್ಷ್ಯ ಅಭಿಯೋಜನೆಗೆ ಸಹಾಯಕವಾಗುವುದಿಲ್ಲ.

14. ಪ್ರಸ್ತುತ ಪ್ರಕರಣದಲ್ಲಿ ಅಸಾ-1 ರವರು ಪಿರ್ಯಾದುದಾರರು, ಗಾಯಾಳು ಹಾಗೂ ಮಹಜರು ಸಾಕ್ಷಿದಾರರಾಗಿ, ಅಸಾ-2 ರವರು ಗಾಯಾಳು ಹಾಗೂ ಪ್ರತ್ಯಕ್ಷ ಸಾಕ್ಷಿದಾರರಾಗಿ ಮತ್ತು ಅಸಾ-3 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿ ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸುವುದರಿಂದ ಅಭಿಯೋಜನೆಗೆ ಯಾವುದೇ ರೀತಿಯ ಸಹಾಯ ಆಗುವುದಿಲ್ಲವೆಂದು ತಿಳಿದು ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆಯನ್ನು ತಿರಸ್ಕರಿಸಿ ಉಳಿದ ಸಾಕ್ಷಿದಾರರ ವಿಚಾರಣೆಯನ್ನು ಕೈಬಿಡಲಾಗಿರುತ್ತದೆ.

15. ಅಭಿಯೋಜಕರು ಈ ಪ್ರಕರಣದ ಅಸಾ-1 ರಿಂದ 3 ರವರು ನ್ಯಾಯಾಲಯದ ಹೊರಗೆ ರಾಜಿ ಮಾಡಿಕೊಂಡಿದ್ದು, ಆರೋಪಿತರಿಗೆ ಶಿಕ್ಷೆ ತಪ್ಪಿಸುವ ಸಲುವಾಗಿ ಅಸಾ-1 ರಿಂದ 3 ರವರು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿರುವುದರಿಂದ ಆರೋಪಿತರನ್ನು ಸೂಕ್ತ ರೀತಿಯಲ್ಲಿ ಶಿಕ್ಷಿಸಬೇಕೆಂದು ತಮ್ಮ ವಾದ ಮಂಡಿಸಿರುತ್ತಾರೆ. ಆರೋಪಿತರ ಪರ ವಕೀಲರು ತಮ್ಮ ವಾದದಲ್ಲಿ ಪ್ರಕರಣದಲ್ಲಿ ಅಸಾ-1 ರಿಂದ 3 ರವರೇ ತಮ್ಮ ಸಾಕ್ಷ್ಯದಲ್ಲಿ ತಮಗೆ ಆರೋಪಿತರಿಂದ ಯಾವುದೇ ತೊಂದರೆ ಆಗಿರುವುದಿಲ್ಲವೆಂದು ನುಡಿದಿರುವ ಕಾರಣ ಆರೋಪಿತರನ್ನು ದೋಷಮುಕ್ತಗೊಳಿಸಬೇಕೆಂದು ವಾದ ಮಂಡಿಸಿರುತ್ತಾರೆ.

16. ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆಯು ಹಾಜರುಪಡಿಸಿದ ಎಲ್ಲಾ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಅಸಾ-1 ರವರು ಪಿರ್ಯಾದುದಾರರು, ಗಾಯಾಳು ಹಾಗೂ ಮಹಜರು ಸಾಕ್ಷಿದಾರರಾಗಿ, ಅಸಾ-2 ರವರು ಗಾಯಾಳು ಹಾಗೂ ಪ್ರತ್ಯಕ್ಷ ಸಾಕ್ಷಿದಾರರಾಗಿ ಮತ್ತು ಅಸಾ-3 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿ ಪ್ರಕರಣದಲ್ಲಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ ಹಾಗೂ

Visit **ecourts.gov.in** for updates or download mobile app "**eCourts Services**" from Android or iOS

ಆರೋಪಿತರೊಡನೆ ರಾಜಿ ಮಾಡಿಕೊಂಡಿರುವುದಾಗಿ ನುಡಿದಿರುತ್ತಾರೆ. ಆದುದರಿಂದ ಅಭಿಯೋಜನೆಯು ಆರೋಪಿತರ ವಿರುದ್ಧ ದೂಷಿಸಲಾದ ಭಾರತೀಯ ದಂಡ ಸಂಹಿತೆ ಕಲಂ 448, 504, 323, 354 ಮತ್ತು 506 ಸಹವಾಚಕ ಕಲಂ 34 ರಡಿಯಲ್ಲಿನ ಒಳಾಂಶಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲವಾಗಿರುವುದರಿಂದ ಸಂಶಯದ ಲಾಭವನ್ನು ಆರೋಪಿತರಿಗೆ ನೀಡಿ, ಆರೋಪಿತರು ಬಿಡುಗಡೆಗೆ ಅರ್ಹರೆಂದು ಅಭಿಪ್ರಾಯಪಟ್ಟು ಅಂಶ-1 ರಿಂದ 5 ಕ್ಕೆ ನಕಾರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.

17. <u>ಅಂಶ - **6** ಃ</u> ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ ಃ

<u>**-ಃ ಆದೇಶ ಃ-**</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಲಂ 448, 504, 323, 354 ಮತ್ತು 506 ಸಹವಾಚಕ ಕಲಂ 34 ರಡಿಯಲ್ಲಿನ ಆರೋಪಗಳಿಂದ ದೋಷಮುಕ್ತಗೊಳಿಸಲಾಗಿದೆ.

ಆರೋಪಿತರ ವೈಯುಕ್ತಿಕ ಬಾಂಡ್ ಹಾಗೂ ಜಾಮೀನು ಬಾಂಡ್ ಈ ಆದೇಶವಾದ ದಿನದಿಂದ ರದ್ದುಗೊಳಿಸಲಾಗಿದೆ.

ಆರೋಪಿತರು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರಡಿಯಲ್ಲಿ ಸಲ್ಲಿಸಿದ ವೈಯುಕ್ತಿಕ ಬಾಂಡ್ ಹಾಗೂ ಜಾಮೀನು ಬಾಂಡ್ ಈ ಆದೇಶವಾದ ದಿನದಿಂದ ಆರು ತಿಂಗಳುವರೆಗೆ ಊರ್ಜಿತವಾಗಿರುತ್ತದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ, ಓದಿ ತಿದ್ದುಪಡಿ ಮಾಡಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕ 25 ನೇ ಜುಲೈ 2026 ರಂದು ಘೋಷಿಸಲಾಯಿತು)

URMILA V

Digitally signed by URMILA V
Date: 2026.07.25 15:59:31 +0530

ಸಹಿ
**(ಉರ್ಮಿಳ.ವಿ.)**
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

Visit **ecourts.gov.in** for updates or download mobile app “**eCourts Services**” from Android or iOS

KACM710016772022

<u>ಅನುಬಂಧ</u>

<u>ಅಭಿಯೋಜನೆಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ</u> ಃ-

ಅಸಾ-1 ಃ ಶ್ರೀಮತಿ ಗಾಯತ್ರಿ
ಅಸಾ-2 ಃ ಕೆ.ಆರ್.ಅಶ್ವಥ್
ಅಸಾ-3 ಃ ಅಂಜಲಿ

<u>ಅಭಿಯೋಜನೆಯ ಪರ ಗುರುತು ಮಾಡಲ್ಪಟ್ಟ ದಾಖಲಾತಿಗಳು</u> ಃ-

ನಿಪಿ-1 ಃ ದೂರು
ನಿಪಿ-2 ಃ ಮಹಜರು
ನಿಪಿ-3,4 ಃ ಛಾಯಚಿತ್ರಗಳು
ನಿಪಿ-5 ಃ ಅಮಾನತ್ತು ಮಹಜರು
ನಿಪಿ-6 ಃ ಸಿಆರ್.ಪಿ.ಸಿ. ಕಲಂ 164 ರಡಿ ಅಸಾ-1 ರವರ ಹೇಳಿಕೆ
ನಿಪಿ-7 ಃ ಅಸಾ-2 ರವರ ಹೇಳಿಕೆ
ನಿಪಿ-8 ಃ ಅಸಾ-3 ರವರ ಹೇಳಿಕೆ

<u>ಅಭಿಯೋಜನೆಯ ಪರ ಗುರುತು ಮಾಡಲ್ಪಟ್ಟ ಮುದ್ದೆಮಾಲುಗಳು</u> ಃ-

- ಇಲ್ಲ -

<u>ಆರೋಪಿತರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ ಃ-</u>

- ಇಲ್ಲ -

<u>ಆರೋಪಿತರ ಪರ ಗುರುತು ಮಾಡಲ್ಪಟ್ಟ ದಾಖಲಾತಿಗಳು</u> ಃ-

- ಇಲ್ಲ -

URMILA V
Digitally signed by URMILA V
Date: 2026.07.25 15:59:23 +0530

ಸಹಿ
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

Visit **ecourts.gov.in** for updates or download mobile app “**eCourts Services**” from Android or iOS